# ಸಣ್ಣ ಮತ್ತು ಅತಿಸಣ್ಣ ರೈತರ ಆಶಾಕಿರಣ ಎಳ್ಳು

ಮಿಂಚಂಚೆ : pushpaphd3866@gmail.com
ಮೋ : 7659805612

ಹೆಚ್. ಹೆಚ್. ಕುಮಾರಸ್ವಾಮಿ
ಹೆಚ್.ಡಿ. ಪುಷ್ಪ

ನಾನೊಬ್ಬ ಸಣ್ಣ ಅಥವಾ ಅತಿಸಣ್ಣ ರೈತಮಳೆ ಕಡಿಮೆ ಕೃಷಿಯಲ್ಲಿ ಬಂಡವಾಳ ಹೂಡಿಕಗೆ ಹೆಚ್ಚು ಕಾಸಿಲ್ಲ! ದುಬಾರಿ ಬೆಳೆಗಳನ್ನು ಬೆಳೆಯುವಷ್ಟು ಫಲವತ್ತಾದ ಭೂಮಿಯಿಲ್ಲ ಕೃಷಿ ಕಾರ್ಮಿಕರ ಅಭಾವ ತಡವಾಗಿ ಶುರುವಾದ ಮುಂಗಾರು ಇಂತಹ ಹತ್ತಾರು ಸಮಸ್ಯೆಗಳು ನಿಮ್ಮನ್ನು ಕಾಡುತ್ತಿರಬಹುದಲ್ಲವೆ? ಯೋಚಿಸಬೇಡಿ, ಇಂತಹ ಪರಿಸ್ಥಿತಿಯಲ್ಲೂ ಸಹ ಬೆಳೆದು ಸಾಧಿಸಿ ಗಳಿಸಬಲ್ಲ ಬೆಳೆಯೊಂದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ. ಹೆಚ್ಚು ಫಲವತ್ತಾದ ಭೂಮಿಯನ್ನು, ಅಧಿಕ ಬಂಡವಾಳವನ್ನು ಮತ್ತು ಅಧಿಕ ಕೃಷಿಶ್ರಮವನ್ನು ಬಯಸದ ಬೆಳೆಗಳಲ್ಲೊಂದು ಎಂದರೆ ಅದು ಎಳ್ಳು. ಎಳ್ಳನ್ನು "ಎಣ್ಣೆಕಾಳುಗಳ ರಾಣಿ" ಎಂದೆ ಕರೆಯಲಾಗುತ್ತದೆ. ಎಳ್ಳು ಪುರಾತನ ಕಾಲದಿಂದಲೂ ಮಾನವನಿಗೆ ತಿಳಿದಿರುವ ಎಣ್ಣೆಕಾಳು ಬೆಳೆಯೆಂದು ಪ್ರಾಚ್ಯಶಾಸ್ತ್ರಜ್ಞರ ಅಧ್ಯಯನದಿಂದ ವೈಜ್ಞಾನಿಕವಾಗಿ ಖಚಿತಗೊಂಡಿದೆ. ಕರಿದು ಕಪ್ಪಾದ ಎಳ್ಳಿನ ಬೀಜಗಳು ಭರತಖಂಡದ ಪುರಾತನ ನಾಗರೀಕತೆಯ ಕೇಂದ್ರಗಳಲ್ಲದೇ, ಐತಿಹಾಸಿಕ ಸ್ಥಳಗಳಾದ ಹರಪ್ಪ ಮಹೆಂಜದಾರೊ ಮತ್ತು ಪಾಶ್ಚಿಮಾತ್ಯ ಪುರಾತನ ನಾಗರೀಕತೆಯು ಕೇಂದ್ರಗಳಾದ ರೋಮ್, ಈಜಿಪ್ಟ್ ಹಾಗೂ ಪ್ರಾಚ್ಯಸ್ಥಳಗಳಲ್ಲಿಯೂ ಕಂಡುಬಂದಿದೆ. ಭಾರತದ ಪ್ರಾಚೀನ ಗ್ರಂಥಗಳಾದ ವೇದಗಳಲ್ಲಿ ಹಾಗೂ ಆಯುರ್ವೇದಕ್ಕೆ ಸಂಬಂದಿಸಿದ ಗ್ರಂಥಗಳಲ್ಲೂ ಸಹ ಎಳ್ಳೆಣ್ಣೆಯ ಉಲ್ಲೇಖವಿದೆ.

ಎಳ್ಳಿನ ಬೀಜಗಳನ್ನು ಹಲವಾರು ತಿಂಡಿ–ತಿನಿಸುಗಳ ಮೇಲೆ ಚಿಮುಕಿಸಿಕೊಂಡು ತಿನ್ನಬಹುದಲ್ಲದೆ; ಚಿಗಣಿ, ಹೋಳಿಗೆ, ಲಾಡು ಮುಂತಾದವುಗಳ ತಯಾರಿಕೆಯಲ್ಲಿಯೂ ಬಳಸಬಹುದು. ಎಳ್ಳಿನ ಬೀಜದಲ್ಲಿ ಪ್ರತಿಶತ 25 ರಷ್ಟು ಸಸಾರಜನಕ ಹಾಗೂ ಶೇ. 50 ರಷ್ಟು ಎಣ್ಣೆ ಅಂಶವಿರುತ್ತದೆ. ಎಳ್ಳಿನ ಕಾಳು ಮತ್ತು ಹಿಂಡಿಗಳಲ್ಲಿ ಮಾನವ ಮತ್ತು ಪ್ರಾಣಿಗಳಾರೋಗ್ಯಕ್ಕೆ ಅವಶ್ಯ ಖನಿಜಾಂಶಗಳಾದ ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ತಾಮ್ರ, ಮೇಗ್ನಿಷಿಯಂ, ಸತು ಮತ್ತು ಪೊಟ್ಯಾಷಿಯಂ ದೊರೆಯುತ್ತವೆ. ಆದ್ದರಿಂದ ಎಳ್ಳು ಮಾನವನ ಸೇವನೆಗೆ ಒಳ್ಳೆಯ ಆಹಾರವಷ್ಟೇ ಅಲ್ಲದೇ, ಎಳ್ಳಿನ ಹಿಂಡಿಯು ಸಾಕುಪ್ರಾಣಿಗಳು ಹಾಗೂ ಹೈನುಗಾರಿಕೆಗಾಗಿ ಸಾಕುವ ಹಸು/ಎಮ್ಮೆಗಳಿಗೂ ಬಹಳ ಯೋಗ್ಯವಾದ ಆಹಾರ ಎಳ್ಳಿನ ಹಿಂಡಿಯನ್ನು ಸಾವಯವ ಗೊಬ್ಬರವಾಗಿಯೂ ಕೂಡ ಬಳಸಬಹುದಾಗಿದೆ. ಇನ್ನು ಎಳ್ಳೆಣ್ಣೆಯ ಬಗ್ಗೆ ಹೇಳುವುದಾದರೆ: ಇದೊಂದು ಅಸಾಧಾರಣ ಗುಣಗಳನ್ನುಳ್ಳ ಪದಾರ್ಥವಾಗಿದ್ದು ಹಲವು ದಿನಗಳವರೆಗೆ ಕೆಡದಂತೆ ಇಡಬಹುದು. ಇದಕ್ಕೆ ಕಾರಣ, ಎಳ್ಳೆಣ್ಣೆಯಲ್ಲಿ ಕಂಡುಬರುವ ಸೆಸಮೋಲ್ ಎಂಬ ಉತ್ಕರ್ಷ ನಿರೋಧಕ. ಇಂತಹ ಗುಣವನ್ನು ಗುರುತಿಸಿ ಎಳ್ಳೆಣ್ಣೆಯನ್ನು ಎಣ್ಣೆಗಳ ರಾಣಿ ಎಂದು ಕೂಡ ಕರೆಯಲಾಗಿದೆ. ಅಷ್ಟೇ ಅಲ್ಲದೆ ಇದರಲ್ಲಿ ಅನೇಕ ಔಷಧಿ ಮುಂತಾದವುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಐರೋಪ್ಯ ಹಾಗೂ ಪೂರ್ವಏಷ್ಯಾ ರಾಷ್ಟ್ರಗಳಲ್ಲಿ ಎಳ್ಳಿಗೆ ಅಪಾರ ಬೇಡಿಕೆಯಿದೆ. ಭಾರತವು ಕಳೆದ ವರ್ಷ ಎಳ್ಳು ರಫ್ತಿನಿಂದ ಸುಮಾರು 4000 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯವನ್ನು ಗಳಿಸಿರುವುದುಮತ್ತು ಈ ವರ್ಷ ಪ್ರತಿ ಕ್ವಿಂಟಾಲ್ 6485 ರೂಪಾಯಿಗಳ ಬೆಂಬಲಬೆಲೆ ನಿಗದಿ ಪಡಿಸಿರುವುದನ್ನು ನೋಡಿದರೆ, ಕ್ರಮವಾಗಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಎಳ್ಳಿನ ಬೇಡಿಕೆಯನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು. ಕೃಷಿ ಉತ್ಪನ್ನಗಳ ರಫ್ತು ಪ್ರಾಧಿಕಾರದ ಸಮೀಕ್ಷೆಯ ಪ್ರಕಾರ ಎಳ್ಳು ಬೆಳೆಯುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕವು ಮೂರನೇ ಸ್ಥಾನದಲ್ಲಿದ್ದು, ಭಾರತದಲ್ಲಿ ಉತ್ಪಾದಿಸಲಾಗುವ ಎಳ್ಳಿನಲ್ಲಿ ಶೇ. 13.5 ರಷ್ಟು ಭಾಗ ನಮ್ಮ ರಾಜ್ಯದ ಕೊಡುಗೆಯಾಗಿದೆ. ರಾಜ್ಯದ ರೈತರು ಎಳ್ಳುಬೆಳೆಯನ್ನು ಬೆಳೆದು ಅಧಿಕ ಆದಾಯ ಗಳಿಸಲು ಇರುವ ಸದವಕಾಶವನ್ನು ಯಶಸ್ವಿಯಾಗಿ ಬಳಸಿಕೊಳ್ಳಬಹುದು.

**ಹಂಗಾಮು:** ಎಳ್ಳನ್ನು ವರ್ಷಪೂರ್ತಿ ಬೆಳೆಯಬಹುದಾದರೂ, ಚಳಿಗಾಲದಲ್ಲಿ ಇಳುವರಿ ಬಹಳ ಕಡಿಮೆ. ಪ್ರಶಸ್ತ ಇಳುವರಿ ಪಡೆಯಲು ಸೂಕ್ತವಾದ ಬಿತ್ತನೆ ಕಾಲವೆಂದರೆ ಸಾಮಾನ್ಯವಾಗಿ ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಾಗಿದ್ದು ಸ್ವಲ್ಪಮಟ್ಟಿಗೆ ನೀರಾವರಿ ಇದ್ದಲ್ಲಿ, ಬೇಸಿಗೆಯುಲ್ಲೂ ಬೆಳೆಯಬಹುದು. ಇಲ್ಲಿ ಬಹಳ ಮುಖ್ಯವಾಗಿ ಗಮನದಲ್ಲಿಡಬೇಕಾದ ಅಂಶವೆಂದರೆ ಬೆಳೆಯು ಹೊಲದಲ್ಲಿ

ನಿಂತಿರುವ ಸಮಯದಲ್ಲಿ ವಾತಾವರಣದಲ್ಲಿನ ತಾಪಮಾನವು 25 ರಿಂದ 35 ಡಿಗ್ರಿ ಸೆಲ್ಸಿಯಸ್ ಇರಬೇಕಾಗುತ್ತದೆ.

**ಮಣ್ಣು:** ವಿವಿಧ ಫಲವತ್ತತೆಯ ಮಣ್ಣಿನಲ್ಲಿ ಎಳ್ಳನ್ನು ಬೆಳೆಯಹುದಾದರೂ, ನೀರು ಚೆನ್ನಾಗಿ ಬಸಿದು ಹೋಗುವ ಗುಣವುಳ್ಳ ಮಣ್ಣು ಬಹಳ ಪ್ರಶಸ್ತವಾದುದು. ತುಂಗಾಭದ್ರ ನದಿತೀರ ಪ್ರದೇಶದಲ್ಲಿ ಭತ್ತದ ಬೆಳೆಯ ನಂತರ ನೀರಾವರಿ ಬೆಳೆಯಾಗಿಯೂ ಸಹ ಬೆಳೆಯಬಹುದು.

**ಹೊಲ ಹದಗೊಳಿಸುವಿಕೆ:** ಎರಡು–ಮೂರು ಸಲ ಚೆನ್ನಾಗಿ ನೇಗಿಲಿನಿಂದ ಉಳುಮೆ ಮಾಡಿ, ಬಿತ್ತನೆಗೆ ಮೊದಲು ಕುಂಟೆಯನ್ನು ಹಾಯಿಸಿ ನಯವಾದ ಮತ್ತು ಪುಡಿ–ಪುಡಿಯಾದ ಮಣ್ಣು ಇರುವಂತೆ ಹೊಲವನ್ನು ತಯಾರಿ ಮಾಡಿಕೊಳ್ಳಬೇಕು.

**ಶಿಫಾರಸ್ಸು ಮಾಡಿದ ತಳಿಗಳು:** ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವು ಸಿದ್ಧಪಡಿಸಿರುವ ತಳಿಗಳಾದ ಡಿ.ಎಸ್–5 ಮತ್ತು ಡಿ. ಎಸ್–9 ಗಳನ್ನು ಕರ್ನಾಟಕದ ಬಹುಭಾಗದ, ಮುಖ್ಯವಾಗಿ ಉತ್ತರ ಕರ್ನಾಟಕದ, ರೈತರು ಬಳಸಬಹುದು. ಪ್ರತಿಕೂಲ ಹವಾಮಾನಕ್ಕೆ ಸೂಕ್ತವಾದ ಬೇಸಾಯ ಯೋಜನೆಗಳು ಮತ್ತು ಕ್ರಮಗಳನ್ನು ಸಿದ್ಧಪಡಿಸಿರುವ ಸಮಯದಲ್ಲಿ ಈ ಮೇಲೆ ತಿಳಿಸಿದ ಎರಡು ತಳಿಗಳ ಜೊತೆಗೆ ಡಿ ಎಸ್–1 ಎಂಬ ತಳಿಯನ್ನೂ ಸಹ ಬಳಸಬಹುದು.

**ಬಿತ್ತನೆ ಬೀಜದ ಪ್ರಮಾಣ:** ಬೀಜ ಉಗ್ಗುವ ಪದ್ಧತಿಯಾದರೆ, ಪ್ರತಿ ಹೆಕ್ಟೇರ್‌ಗೆ 4 ರಿಂದ 5 ಕಿ. ಗ್ರಾಂ ಬೀಜವನ್ನೂ ಸೀಡ್ ಡ್ರಿಲ್ ವಿಧಾನದಲ್ಲಾದರೆ, 25 ರಿಂದ 30 ಕಿ. ಗ್ರಾಂ ಬೀಜವನ್ನು ಬಳಸಬೇಕು.

**ಬೀಜೋಪಚಾರ:** ಮಣ್ಣುಜನ್ಯ ಹಾಗೂ ಬೀಜಜನ್ಯ ರೋಗ–ರುಜಿನಗಳಿಂದ ರಕ್ಷಿಸುವ ಬಿತ್ತನೆಗೆ ಮೊದಲು ಬೀಜೋಪಚಾರವನ್ನು ಮಾಡುವುದು ಸೂಕ್ತ. ಅದಕ್ಕಾಗಿ ಪ್ರತಿ ಕಿ. ಗ್ರಾಂ ಬೀಜಕ್ಕೆ 3 ಗ್ರಾಂ ಥೈರಾಮನ್ನು ಅಥವಾ 1.5 ಗ್ರಾಂ ಥೈರಾ ಜೊತೆಗೆ 1.5 ಗ್ರಾಂ ಬಾವಿಸ್ಟಿನ್ ಸೇರಿಸಿ ಬೀಜೋಪಚಾರ ಮಾಡಬೇಕು. ದುಂಡಾಣು ಎಲೆಚುಕ್ಕೆ ರೋಗದ ಬಾಧೆ ಹೆಚ್ಚಾಗಿರುವ ಪ್ರದೇಶದಲ್ಲಿ ಅಗ್ರಿಮೈಸಿನ್–100 ಎಂಬ ರೋಗನಾಶಕವನ್ನು 0.25 ಮಿ. ಲೀ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ದ್ರಾವಣ ತಯಾರಿಸಿಕೊಂಡು, ಬಿತ್ತನೆ ಬೀಜವನ್ನು ಅರ್ಧ ಗಂಟೆ ಕಾಲ ತೋಯಿಸಿ, ನಂತರ 52 ರಿಂದ 54 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿರುವ ಬಿಸಿ ನೀರಿನಲ್ಲಿ ಅರ್ಧ ಗಂಟೆ ಕಾಲ ನೆನೆಸಿ, ಬಸಿದು ಒಣಗಿಸಿ ಬಿತ್ತನೆ ಮಾಡಬೇಕು.

**ಬಿತ್ತನೆ ವಿಧಾನ:** ಕೃಷಿ ಕಾರ್ಮಿಕರು ಸುಲಭವಾಗಿ ದೊರೆಯುವಂತಿದ್ದರೆ ಅಥವಾ ಕುಟುಂಬದ ಸದಸ್ಯರು ದೊರೆಯುವುದಾದರೆ ಮತ್ತು ಬೀಜಗಳು ಕಡಿಮೆ ಪ್ರಮಾಣದಲ್ಲಿ ದೊರೆಯುವಂತಿದ್ದರೆ: ಹೊಲದಲ್ಲಿ ಸಾಲುಗಳನ್ನು ಮಾಡಿ, ದಿಂಡುಗಳನ್ನೆತ್ತಿ 30 ಸೆಂ. ಮೀ. ಅಂತರದ ಸಾಲುಗಳಲ್ಲಿ ಗಿಡದಿಂದ ಗಿಡಕ್ಕೆ 10 ರಿಂದ 15 ಸೆಂ. ಮೀ. ದೂರದಲ್ಲಿ 2.5 ಸೆಂ. ಮೀ ಆಳದಲ್ಲಿ ಗುಣಿಗೆ 3 ರಿಂದ 4 ಬೀಜಗಳನ್ನು ಮಣ್ಣಿನಲ್ಲಿ ಊಣಿ ಮಣ್ಣಿನಿಂದ ಮುಚ್ಚಬೇಕು. ಅಥವಾ ಸೀಡ್ ಡ್ರಿಲ್ ಸಾಧನವನ್ನು ಬಳಸಿಯೂ ಕೂಡ ಬಿತ್ತಬಹುದು. ಒಂದು ವೇಳೆ ಬೀಜಗಳು ಹೇರಳವಾಗಿ ದೊರೆತು, ಕೃಷಿಕಾರ್ಮಿಕರ ಕೊರತೆಯಿದ್ದಲ್ಲಿ ಸಾಲುಗಳನ್ನು ಮಾಡದೆ ಕೈಯಲ್ಲಿ ಉಗ್ಗಿ ಹೊಲದಲ್ಲಿ ಪ್ರಸರಿಸುವಂತೆ ನಂತರ ಬಿತ್ತಲ್ಪಟ್ಟ ಬೀಜಗಳು ತೆಳುವಾದ ಮಣ್ಣಿನ ಪದರದಿಂದ ಮುಚ್ಚಲ್ಪಡುವಂತೆ ಮಾಡಬೇಕು.

**ಪೋಷಕಾಂಶಗಳ ನಿರ್ವಹಣೆ:** ಪ್ರತಿ ಹೆಕ್ಟೇರಿಗೆ ಹೊಲಕ್ಕೆ 5 ಟನ್ ಚೆನ್ನಾಗಿ ಕೊಳೆತು ಪುಡಿಯಾಗಿರುವ ತಿಪ್ಪೆ ಗೊಬ್ಬರವನ್ನು ಹಾಕಿ ಮಣ್ಣಿನಲ್ಲಿ ಚೆನ್ನಾಗಿ ಬೆರಸಬೇಕು. ಸಮೀಪದ ಮಣ್ಣು ಪರೀಕ್ಷೆ ಪ್ರಯೋಗಾಲಯದಲ್ಲಿ ಹೊಲದ ಮಣ್ಣನ್ನು ಪರೀಕ್ಷಿಸಿದ ನಂತರ ಶಿಫಾರಸ್ಸು ಮಾಡಿದ ಸಾರಜನಕ, ರಂಜಕ ಮತ್ತು ಪೊಟ್ಯಾಷಿಯಂಗಳನ್ನು ಬಳಸುವುದರಿಂದ ಅಧಿಕ ಇಳುವರಿಯನ್ನು ಪಡೆಯುವುದಲ್ಲದೆ, ಮಣ್ಣಿನ ಆರೋಗ್ಯ ಮತ್ತು ಫಲವತ್ತತೆಯನ್ನು ಕಾಪಾಡಿಕೊಳ್ಳಬಹುದು. ಹೀಗೆ, ಶಿಫಾರಸ್ಸು ಮಾಡಿದ ಸಾರಜನಕದಲ್ಲಿ ಅರ್ಧದಷ್ಟು, ಪೂರ್ತಿ ರಂಜಕ ಮತ್ತು ಪೂರ್ತಿ ಪೊಟ್ಯಾಷಿಯಂಗಳನ್ನು ಬಿತ್ತನೆಯ ಸಮಯದಲ್ಲೂ; ಇನ್ನುಳಿದ ಅರ್ಧದಷ್ಟು ಸಾರಜನಕವನ್ನು ಬೆಳೆಯು ಹೂವು ಬಿಡುವ ಹಂತ ತಲುಪಿದಾಗ (ಅಂದರೆ, ಬಿತ್ತನೆಯಾದ 30 ರಿಂದ 35 ದಿನಗಳಲ್ಲಿ) ಮೇಲುಗೊಬ್ಬರವಾಗಿ ನಿರೀಕ್ಷಿಸಬಹುದು.

**ಕಳೆ ನಿರ್ವಹಣೆ:** ನೀರಾವರಿ ಬೆಳೆಯಾದಲ್ಲಿ, ಬಿತ್ತನೆಯಾದಾಗಿನಿಂದ 15 ರಿಂದ 20 ದಿನಗಳವರೆಗೆ ಹೊಲದಲ್ಲಿ ಕಳೆ ಇಲ್ಲದಂತೆ ನೋಡಿಕೊಳ್ಳಬೇಕು.

**ಕೀಟ ಮತ್ತು ರೋಗ ನಿರ್ವಹಣೆ:** ಕೀಟಬಾಧೆಗಳಾದ ಎಲೆಸುರುಳಿ, ಕಾಯಿಕೊರಕ (ಅಂಟಿಗ್ಯಾಸ್ತ್ರ) ಹಾಗೂ ಎಲೆಜಿಗಿ ಹುಳುಗಳು ಹಾಗೂ ರೋಗಬಾಧೆಗಳಾದ ಫಲ್ಲೋಡಿ, ಬೂದು ರೋಗ ಹಾಗೂ ಬೇರುಕೊಳೆಯುವಿಕೆ (ಮ್ಯಾಕ್ರೊಫೋಮಿನ) ಎಳ್ಳಿಗೆ ಬರುವ ಪ್ರಮುಖ ಪೀಡೆಗಳು, ಕೀಟ ಮತ್ತು/ ಅಥವಾ ರೋಗಗಳು ಕಾಣಿಸಿಕೊಂಡ ತಕ್ಷಣ

ಹತ್ತಿರದ ಕೃಷಿ ವಿಜ್ಞಾನ ಕೇಂದ್ರ, ಕೃಷಿ ಕಾಲೇಜು, ರೈತ ಸಂಪರ್ಕ ಕೇಂದ್ರ, ಕೃಷಿ ಕ್ಲಿನಿಕ್, ಅನುಭವಿ ರೈತಮಿತ್ರರು, ಅಥವಾ ಹೈದರಾಬಾದಿನಲ್ಲಿರುವ, ಭಾರತೀಯ ಕೃಷಿ ಸಂಶೋಧನಾ ಪಾರಿಷತ್ತಿನ, ಭಾರತೀಯ ಎಣ್ಣೆಕಾಳುಗಳ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳನ್ನು ಸಂಪರ್ಕಿಸಿ ಸೂಕ್ತ ಸಲಹೆ ಪಡೆಯಬೇಕು.

**ಕಟಾವು ಮತ್ತು ಒಕ್ಕಣೆ:** ಕಾಂಡ ಮತ್ತು ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಎಲೆಗಳು ಉದುರಲು ಪ್ರಾರಂಭಿಸಿದಾಗ ಗಿಡಗಳನ್ನು ಬುಡದಿಂದ ಕಟಾವು ಮಾಡಿ, ಕಂತೆಗಳನ್ನು ಕಟ್ಟಿ, ಸುರಕ್ಷಿತ ಜಾಗದಲ್ಲಿ ಒಟ್ಟಿ, ಸುಮಾರು ಒಂದು ವಾರದ ನಂತರ, ಕಟ್ಟಿಗೆಗಳಿಂದ ಬಡಿದು ಬೇರ್ಪಡಿಸಿದ ಎಳ್ಳಿನ ಕಾಳುಗಳನ್ನು ಸ್ವಚ್ಛಗೊಳಿಸಿ, ಬಿಸಿಲಿನಲ್ಲಿ ಒಣಗಿಸಿ, ಗೋಣಿಚೀಲಗಳಲ್ಲಿ ಮೂಟೆ ಕಟ್ಟಿ ಶೇಖರಿಸಿಡಬೇಕು.

**ಇಳುವರಿ ಮತ್ತು ಆದಾಯ:** ಪ್ರತಿ ಹೆಕ್ಟೇರಿಗೆ ಸುಮಾರು 6.0 ರಿಂದ 7.0 ಕ್ವಿಂಟಾಲ್ ಬೀಜವನ್ನು ಪಡೆಯಬಹುದು. ಆದಾಯವನ್ನು ಕುರಿತು ಹೇಳಬೇಕೆಂದರೆ: 2019–20ನೇಸಾಲಿನ ಶ್ವೇತಪತ್ರದಲ್ಲಿ (ಬಜೆಟಿನಲ್ಲಿ) 2019 ನೇ ಸಾಲಿನ ಮುಂಗಾರು ಬೆಳೆಗಳಲ್ಲೊಂದಾದ ಎಳ್ಳಿಗೆ ನಿಗಧಿಪಡಿಸಿರುವ ಬೆಂಬಲಬೆಲೆಯನ್ನು (6485) ಗಮನಿಸಿದಾಗ, ಎಲ್ಲಾ ಖರ್ಚುಗಳನ್ನು ಕಳೆದು ಪ್ರತಿ ಹೆಕ್ಟೇರಿಗೆ ಸುಮಾರು 30 ಸಾವಿರದಿಂದ 45 ಸಾವಿರ ರೂಪಾಯಿಗಳವರೆಗೂ ಗಳಿಸಬಹುದು, ಅದೂ ಕೇವಲ ಮೂರು ತಿಂಗಳುಗಳಲ್ಲಿಯೇ.

******

**ಸೂಚನೆ :** ಪುಸ್ತಕಗಳನ್ನು ಖರೀದಿಸಲು, ಕೃಷಿ ಪ್ರದೀಪಿಕೆ ಪತ್ರಿಕೆಗೆ ಚಂದಾದಾರರಾಗಲು ಮತ್ತು ಜಾಹೀರಾತುಗಳನ್ನು ನೀಡಲು ಹಣವನ್ನು ತಮ್ಮ ಪೂರ್ಣ ವಿಳಾಸದೊಂದಿಗೆ The Editor, Publication Centre, UAS, Raichur ಇವರ ಹೆಸರಿನಲ್ಲಿ ಡಿಮ್ಯಾಂಡ ಡ್ರಾಫ್ಟ್ ತೆಗೆದು, **ಸಂಪಾದಕರು, ಪ್ರಕಟಣಾ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು 584 104 ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕು.**

**ವಿಶೇಷ ಸೂಚನೆ :** ಪುಸ್ತಕಗಳನ್ನು ಅಂಚೆ ಮೂಲಕ ಕಳುಹಿಸಬೇಕಾದಲ್ಲಿ ಅಂಚೆ ವೆಚ್ಚವನ್ನು ಸೇರಿಸಿ ಡಿ.ಡಿ. ಕಳುಹಿಸಬೇಕು.

**ಹೆಚ್ಚಿನ ವಿವರಗಳಿಗೆ ಸಂಪಾದಕರನ್ನು (08532 – 220029) ಸಂಪರ್ಕಿಸಬೇಕಾಗಿ ವಿನಂತಿ.**

ಲೇಖಕರ ಸಂಖ್ಯೆ ಮೂವರಿಗೆ ಸೀಮಿತವಿರಲಿ. ಲೇಖನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ವಿದ್ಯುನ್ಮಾನ ಪ್ರತಿ (Soft Copy) ಮೂಲಕ ಸಂಪಾದಕರ ಮಿಂಚಂಚೆಗೆ (editorpc@uasraichur.edu.in) ಕಳುಹಿಸಬೇಕು. ಆಯಾ ಹಂಗಾಮಿಗೆ ತಕ್ಕಂತಹ ಲೇಖನಗಳನ್ನು ಸಾಕಷ್ಟು ಮೊದಲೇ (ಕನಿಷ್ಟ ಒಂದೂವರೆ ತಿಂಗಳು ಮೊದಲು) ತಲುಪಿಸಬೇಕು. ಬೇರೆ ಪತ್ರಿಕೆಗಳಿಗೆ ಈಗಾಗಲೇ ಸಲ್ಲಿಸಿರುವ ಲೇಖನಗಳನ್ನು ಕೃಷಿ ಪ್ರದೀಪಿಕೆಗೆ ಪರಿಗಣಿಸುವುದಿಲ್ಲ. ದಯಮಾಡಿ ಅಂಥ ಲೇಖನಗಳನ್ನು ಕೃಷಿ ಪ್ರದೀಪಿಕೆಗೆ ಕಳುಹಿಸಬೇಡಿ. ನಿಮ್ಮ ದೂರವಾಣಿ ಸಂಖ್ಯೆ ತಿಳಿಸಲು ಮರೆಯದಿರಿ.

**–ಸಂಪಾದಕರು**